(ಸದನವು ಮಧ್ಯಾಹ್ನ 12 ಗಂಟೆ 03 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ಮಧ್ಯಾಹ್ನ 2 ಗಂಟೆ 30 ನಿಮಿಷಕ್ಕೆ ಸಮಾವೇಶಗೊಳ್ಳುವಂತೆ ನಿಶ್ಚಯಿಸಿತು)

(ಪುನಃ ಸದನವು ಅಪರಾಹ್ನ 2 ಗಂಟೆ 53 ನಿಮಿಷಕ್ಕೆ ಸಮಾವೇಶಗೊಂಡಿತು. ಉಪಾಧ್ಯಕ್ಷರಾದ ಶ್ರೀ ಎನ್.ಹೆಚ್. ಶಿವಶಂಕರರೆಡ್ಡಿಯವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದ್ದರು)

(ಈ ಹಂತದಲ್ಲಿ ಬಿಜೆಪಿಯ ಸದಸ್ಯರುಗಳು ಸದನದ ಬಾವಿಯಲ್ಲಿ ನಿಂತು ಸಿಬಿಐ ತನಿಖೆಯಾಗಲೇಬೇಕು ಎಂದು ಸರ್ಕಾರದ ವಿರುದ್ಧ ಘೋಷಣೆಯನ್ನು ಕೂಗುತ್ತಿದ್ದರು)

ಉಪಾಧ್ಯಕ್ಷರು:– ಕುಮಾರಸ್ವಾಮಿಯವರೆ ನೀವು ಮಾತನಾಡಿ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ:– ಮಾನ್ಯ ಉಪಾಧ್ಯಕ್ಷರೆ, ನಾನು ಬೆಂಗಳೂರು ನಗರದ ಕೆರೆಗಳ ವಿಚಾರದಲ್ಲಿ ನಾನು ಸುದೀರ್ಘವಾಗಿ ಸರ್ಕಾರದ ಗಮನಕ್ಕೆ ತಂದು ಪ್ರಸ್ತಾಪ ಮಾಡಿದ್ದೇನೆ. ಕೆರೆಗಳ ವಿಷಯದಲ್ಲಿ ತನಿಖೆಯಾಗಬೇಕೆಂದು ನಮ್ಮ ಒತ್ತಾಯವೇನಿದೆ, ಇದರ ಜೊತೆಗೆ ಮತ್ತೊಂದು ಕರ್ನಾಟಕ ರಾಜ್ಯದ Energy Departmentನಲ್ಲಿ ವಿದ್ಯುತ್ ಖರೀದಿಯಲ್ಲಿ ಕಳೆದ ಆರು ವರ್ಷಗಳಲ್ಲಿ ಆಗಿರುವಂಥ ಅಕ್ರಮ ಅವ್ಯವಹಾರಗಳ ಬಗ್ಗೆ ತನಿಖೆ ಮಾಡಿಸುತ್ತೇವೆಂದು ಹೇಳಿದ್ದಾರೆ, ಅಲ್ಲದೆ ಕೆರೆಗಳ ಅಭಿವೃದ್ಧಿ ವಿಚಾರದಲ್ಲಿ ಯಾವ ತನಿಖೆಯನ್ನು 2 ವರ್ಷದಿಂದ ವಿರೋಧ ಪಕ್ಷದ ಸದಸ್ಯರನ್ನು ಕರೆಯಿಸಿ ಒಂದು ಕೊನೆ ಹಂತದಲ್ಲಿ ಸರ್ಕಾರ ನಮಗೆ ಮಾತು ಕೊಟ್ಟಿದ್ದಾರೆ, ಈ ತನಿಖೆ ಸದನ ಸಮಿತಿ ರಚನೆ ಮಾಡಬೇಕೆಂದು ನನ್ನ ಒತ್ತಾಯವೇನಿದೆ, ವಿದ್ಯುತ್ ಖರೀದಿ ವಿಚಾರದಲ್ಲಿ ಸದನ ಸಮಿತಿ ರಚನೆಯಾಗಬೇಕೆಂದು, ಸರ್ಕಾರ ಘೋಷಣೆ ಮಾಡಬೇಕಾಗುತ್ತದೆ. ವಿದ್ಯುತ್ ಖರೀದಿ ಹಾಗೂ ಕೆರೆಗಳ ವಿಚಾರದಲ್ಲಿ ಸರ್ಕಾರ ತನ್ನ ನೀತಿಯನ್ನು ಸ್ಪಷ್ಟ ಪಡಿಸಬೇಕೆಂದು ನಾನು ಹೇಳುತ್ತಿದ್ದೇನೆ.